ಕಂಪ್ಲಿ ಸಹಕಾರ ಸಕ್ಕರೆ ಕಾರ್ಖಾನೆಯು 1958ರಲ್ಲಿ ಸ್ಥಾಪನೆಯಾಗಿದ್ದು ಬಹಳ ಹಳೆಯದಾಗಿರುತ್ತದೆ. ಇದರ ಕಬ್ಬು ಅರೆಯುವ ಸಾಮರ್ಥ್ಯ ದಿನವಹಿ 1200 ಮೆಟ್ರಿಕ್ ಟನ್ ಆಗಿರುತ್ತದೆ. ಈ ಕಾರ್ಖಾನೆಯ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾ ಮಂಡಲದ ಮತಿಯಿಂದ ನಂತರ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್‌ರವರಿಂದ ಅಧ್ಯಯನ ವರದಿಯನ್ನು ಪಡೆಯಲಾಗಿರುತ್ತದೆ. ಹಾಲಿ ಇರುವ ಸಾಮರ್ಥ್ಯದಲ್ಲೇ ಆಧುನೀಕರಣ ಗೊಳಿಸಲು ಅಂದಾಜು ರೂ. 1800 ಲಕ್ಷ ಹಾಗೂ ಕಬ್ಬು ಅರೆಯುವ ಸಾಮರ್ಥ್ಯವನ್ನು ದಿನವಹಿ 2500 ಟನ್‌ಗೆ ಹೆಚ್ಚಿಸಲು ಅಂದಾಜು ರೂ. 3500 ಲಕ್ಷ ಬೇಕಾಗುವುದೆಂದೂ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾ ಮಂಡಳದ ಅಭಿಪ್ರಾಯವಾಗಿರುತ್ತದೆ. ಟಾಟಾ ಕನ್ಸ್‌ಲ್ಟೆನ್ಸಿ ವರದಿಯ ಪ್ರಕಾರ ಈ ಕಾರ್ಖಾನೆಯನ್ನು ಇರುವ ಸಾಮರ್ಥ್ಯದಲ್ಲೇ ಆರಂಭಿಸಲು ರೂ. 705.42 ಲಕ್ಷ ಅಗತ್ಯವಿದ್ದು, ಇಷ್ಟನ್ನು ವೆಚ್ಚ ಮಾಡಿದ ಮೇಲೂ ಸುಮಾರು 7 ವರ್ಷಗಳವರೆವಿಗೆ ಕೆಲಸ ನಿರ್ವಹಿಸಲು ಸಾಧ್ಯವೆಂದೂ ಹಾಗೂ ಆರ್ಥಿಕವಾಗಿ ಸಾಧ್ಯತೆ ಇರಬೇಕಾದರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯವನ್ನು 2500 ಟನ್‌ಗಳಿಗೆ ಹೆಚ್ಚಿಸಬೇಕೆಂದು ಅಭಿಪ್ರಾಯವಾಗಿರುತ್ತದೆ.

ಈ ಕಾರ್ಖಾನೆಯ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ಉದ್ದೇಶದಿಂದ ಉನ್ನತ ಮಟ್ಟದ ವಿವಿಧ ಹಂತಗಳಲ್ಲಿ ಸಭೆಗಳನ್ನು ನಡೆಸಲಾಗಿರುತ್ತದೆ. ದಿನಾಂಕ 25-11-1994 ರಂದು ಕೂಡ ಕಾರ್ಯದರ್ಶಿ, ಸಹಕಾರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದು, ಅಪೆಕ್ಸ್‌ಬ್ಯಾಂಕ್ ಮತ್ತು ಜಿಲ್ಲಾ ಬ್ಯಾಂಕುಗಳು ಈಗಾಗಲೇ ಸುಮಾರು ರೂ. 300 ಲಕ್ಷ ಸಾಲ ಬಾಕಿ ಇರುವುದರಿಂದ ಹೊಸ ಸಾಲವನ್ನು ನೀಡಲು ಸಮ್ಮತಿಸಿರುವುದಿಲ್ಲ, ಕಾರ್ಖಾನೆಯ ಮತ್ತು ರೈತರ ಹಿತದೃಷ್ಟಿಯಿಂದ ಹಣಕಾಸು ನೆರವು ನೀಡುವುದನ್ನು ತೀವ್ರವಾಗಿ ಪರಿಶೀಲಿಸಬೇಕೆಂದು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿಗೆ ತಿಳಿಸಲಾಗಿರುತ್ತದೆ.

ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯ ಯಂತ್ರೋಪಕರಣಗಳು ಹಳೆಯದಾಗಿರುವುದರಿಂದ, ಕಬ್ಬಿನ ಉತ್ಪಾದನೆ ಕಡಿಮೆ ಇರುವುದರಿಂದ ಆರ್ಥಿಕ ದುಸ್ಥಿತಿ ತಲುಪಿರುವುದರಿಂದ ಹಾಗೂ ಹಾಲಿ ಇರುವ ಕಬ್ಬು ಅರೆಯುವ ಸಾಮರ್ಥ್ಯ ಆರ್ಥಿಕವಾಗಿ ಶಕ್ಯ ಇಲ್ಲದಿರುವುದರಿಂದ ಈ ಕಾರ್ಖಾನೆಯ ಸುಧಾರಣೆಗಾಗಿ ಲಕ್ಷಾಂತರ ರೂ.ಗಳ ನೆರವು ಅಗತ್ಯವಿರುತ್ತದೆ. ಆದುದರಿಂದ ಸಂಬಂಧಪಟ್ಟವರ ಸಭೆಯನ್ನು ಕರೆದು ಚರ್ಚಿಸಿ ಸೂಕ್ತ ಕ್ರಮವಿಡಲಾಗುವುದು.

2. ವಿಟ್ಲ ಕ್ಷೇತ್ರದಲ್ಲಿ 1993-94ನೇ ವರ್ಷದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಮಂಜೂರಾಗಿರುವ ಬಗ್ಗೆ

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ ಕ್ಷೇತ್ರ) : ಸನ್ಮಾನ್ಯ ಅಧ್ಯಕ್ಷರೆ, ನನ್ನ ವಿಟ್ಲ ವಿಧಾನಸಭಾ ಕ್ಷೇತ್ರದ ವಿಟ್ಲದಲ್ಲಿ 1993-94ನೇ ವರ್ಷದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಮಂಜೂರಾಗಿ ಎರಡು ವರ್ಷಗಳಿಂದ ಪಂಚಾಯಿತಿ ಕಟ್ಟಡದಲ್ಲಿ ತರಗತಿಗಳು ನಡೆಯುತ್ತಿದೆ. ಬರುವ ವರ್ಷ ತರಗತಿಗಳನ್ನು ನಡೆಸಲು ಕೊಠಡಿಗಳ ಕೊರತೆಯಿಂದ ಅಸಾಧ್ಯವಾಗಿದ್ದು ತಕ್ಷಣ ವಿಟ್ಲ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ಒದಗಿಸಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಈಗ ಹೊಸದಾಗಿ ಮಂಜೂರಾಗಿರುವ ಕಾಲೇಜುಗಳು ಇವೆ. ನಿವೇಶನ ತೆಗೆದುಕೊಂಡಿದ್ದಾರೆ. ಅದಕ್ಕೆ ಪ್ಲಾನ್ ಎಸ್ಟಿಮೇಟ್ ಮಾಡುವುದಕ್ಕೆ ಪಿ.ಡಬ್ಲೂಡಿ ಇಲಾಖೆಗೆ ಕಳುಹಿಸಿ ಕೊಟ್ಟಿದ್ದೇವೆ. ಈ ವರ್ಷದ ಬಡ್ಜೆಟ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಪಡುತ್ತೇವೆ.